**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ**<br>**(ಆರ್.ಪಿ.ಸಂಖ್ಯೆ 57)**<br>**ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 250/2022**

**ಫ್ರಾಸಾ- 1 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಲಲಿತಾ |
| ಗಂಡನ ಹೆಸರುಃ | : | ಚಂದ್ರು |
| ವಯಸ್ಸುಃ | : | 57 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ದೊಡ್ಡಮಂಡಿಗನಹಳ್ಳಿ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:04-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಚಾಸಾ-2ರಿಂದ 7 ರವರು ಗೊತ್ತು. ನನಗೆ ಇಬ್ಬರು ಹೆಣ್ಣುಮಕ್ಕಳು. ಅವರ ಹೆಸರು ಪಲ್ಲವಿ ಮತ್ತು ತೇಜಸ್ವಿನಿ. ಈಗ್ಗ 10 ವರ್ಷಗಳ ಹಿಂದೆ ನನ್ನ ಮಗಳು ತೇಜಸ್ವಿನಿಯ ಮದುವೆಯನ್ನು ಆರೋಪಿತರ ಜೊತೆ ನಡೆಸಿರುತ್ತೇವೆ. ಮದುವೆ ನಂತರ ಅವರಿಬ್ಬರೂ ಬೆಂಗಳೂರಿನಲ್ಲಿ ವಾಸವಿದ್ದರು. ಸುಮಾರು6-7 ವರ್ಷ ಅಲ್ಲಿಯೇ ವಾಸವಿದ್ದರು, ನಂತರ ಅಲ್ಲಿ ಕೆಲಸ ಬಿಟ್ಟು ದೊಡ್ಡಮಂಡಿಗನಹಳ್ಳಿಗೆ ಬಂದು ಆರೋಪಿತರ ಮನೆಯಲ್ಲಿ ವಾಸವಿದ್ದರು. ಮದುವೆಯ ಮಾತುಕತೆಯನ್ನು ನಾನು ಮತ್ತು ಆರೋಪಿತರ ತಾಯಿ ನಡೆಸಿದ್ದೆವು. ಬೇರೆ ಯಾವುದೇ ವಿಚಾರದಲ್ಲಿ ಮಾತುಕತೆ ಆಗಿರಲಿಲ್ಲ. ಊರಿಗೆ ಬಂದ ನಂತರ ಅವರಿಬ್ಬರ ಜೀವನ ಚೆನ್ನಾಗಿರಲಿಲ್ಲ, ಯಾವಾಗಲೂ ಜಗಳವಾಗುತ್ತಿತ್ತು, ಆರೋಪಿತರು ಯಾವಾಗಲೂ ಜೂಜಾಟ ಮಾಡಿ ದುಡ್ಡನ್ನು ಕಳೆದುಕೊಂಡಿದ್ದರು, ಅದರಿಂದಾಗಿ ನನ್ನ ಮಗಳು ತೇಜಸ್ವಿನಿಯ

ಒಡವೆಯನ್ನು ಕೂಡ ಮಾರಾಟ ಮಾಡಿದ್ದರು. ಮಗುವನ್ನು ಶಾಲೆಗೆ ಸೇರಿಸಲು ಹಣ ಇಲ್ಲದಿದ್ದ ಕಾರಣ ನಮ್ಮ ಮನೆ ಹತ್ತಿರ ಇದ್ದ ಒಂದು ಕಂಪೆನಿಗೆ ಕೆಲಸಕ್ಕೆ ಹೋಗುತ್ತಿದ್ದಳು. ಕೆಲಸಕ್ಕೆ ಹೋಗಬೇಡ ಎಂದು ಯಾವಾಗಲೂ ಆರೋಪಿತರು ಜಗಳ ಮಾಡುತ್ತಿದ್ದರು.

2.ಈಗ್ಗೆ 3 ವರ್ಷದ ಹಿಂದೆ ಬೇರೆಯವರು ಫೋನ್ ಮಾಡಿ ನಮ್ಮ ಮಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆಂದು ತಿಳಿಸಿದರು. ವಿಚಾರ ತಿಳಿದು ಮನೆ ಬಳಿ ಹೋದಾಗ ಅಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ತಿಳಿಸಿದರು. ನಂತರ ನಾನುಆಸ್ಪತ್ರೆಗೆ ಹೋದೆನು. ಅಲ್ಲಿ ಮಗಳು ಜೀವಂತ ಇರಲಿಲ್ಲ. ಸತ್ತುಹೋಗಿದ್ದಳು. ಆಸ್ಪತ್ರೆಯಲ್ಲಿ ನಾನು ಹೋದಾಗ ತುಂಬಾ ಜನರು ಇದ್ದರು. ಆಸ್ಪತ್ರೆಯಲ್ಲಿ ಊರವರು, ನಮ್ಮ ಮಗಳಿಗೆ ಆರೋಪಿತರು ಸಿಕ್ಕಾಬಟ್ಟೆ ಹೊಡೆದು ಕೊಲೆ ಮಾಡಿರುವುದಾಗಿ ಹೇಳಿದರು. ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ನನ್ನ ಮಗಳ ಶವವನ್ನು ನೋಡಿದೆನು. ಮುಖ ಕಪ್ಪಗಾಗಿ ಊದಿಕೊಂಡಿತ್ತು, ಮೈಮೇಲೆ ರಕ್ತ ಇತ್ತು. ಆಕೆ ಮೃತಪಟ್ಟಾಗ ಆಕೆಗೆ 5 ವರ್ಷದ ಗಂಡು ಮಗು ಇತ್ತು. ಆರೋಪಿತರಲ್ಲಿ ವಿಚಾರಿಸಿದಾಗ ನನ್ನ ಮಗಳೇ ನೇಣುಹಾಕಿಕೊಂಡದ್ದೆಂದು ಹೇಳಿದರು. ಈ ಬಗ್ಗೆ ನಾನು ಪೊಲೀಸರಿಗೆ ನಿಪಿ-1 ರಂತೆ ದೂರು ಕೊಟ್ಟಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-1(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಆರೋಪಿತರ ಮನೆಯಲ್ಲಿ ನನ್ನ ಮಗಳು, ಆರೋಪಿತ, ಅತ್ತೆ ಸರೋಜಮ್ಮ, ಮಾವ ಬಸವೇಗೌಡ ವಾಸವಿದ್ದರು. ನನ್ನ ಮಗಳು ಮೃತಪಡಲು ಆರೋಪಿತ ಮತ್ತು ಅವರ ತಂದೆ ತಾಯಿ ಕಾರಣರು.

3.ಮಾರನೇ ದಿವಸ ಮಗಳ ಶವವನ್ನು ಆರೋಪಿತರ ಮನೆ ಬಳಿ ದಫನ್ ಮಾಡಲಾಯಿತು. ನನ್ನ ಮಗಳು ಮತ್ತು ಆರೋಪಿತರ ಮದುವೆ ಲಗ್ನಪತ್ರಿಕೆ ಮತ್ತು ಅದಕ್ಕೆ

ಸಂಬಂಧಪಟ್ಟ ಫೋಟೋಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇವೆ. ಅವುಗಳನ್ನು ಈಗ ನೋಡುತ್ತಿದ್ದು ಲಗ್ನಪತ್ರಿಕೆಯನ್ನು ನಿಪಿ-2 ಎಂದು, 6 ಫೋಟೋಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು. ಅದನ್ನು ಪೊಲೀಸರು ವಶಪಡಿಸಿಕೊಂಡು ನಿಪಿ-4ರಂತೆ ಮಹಜರು ಮಾಡಿದರು. ಅದರಲ್ಲಿ ನನ್ನ ರುಜು ಇದ್ದು ನಿಪಿ-4(ಎ) ಎಂದು ಗುರುತಿಸಲಾಯಿತು. ನನ್ನ ಮಗಳು ಸಾಯುವ ಕಾಲಕ್ಕೆ ಆಕೆಯ ಮದುವೆಯಾಗಿ 7 ವರ್ಷ ಆಗಿತ್ತು. ಮತ್ತೆ ನನ್ನನ್ನು ಪೊಲೀಸರು ವಿಚಾರ ಮಾಡಿರುತ್ತಾರೆ. ಅವರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಭಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ನನ್ನ ಮಗಳು ಕೆಲಸಕ್ಕೆ ಹೋಗುತ್ತಿದ್ದಾಗ ಆರೋಪಿತರು ಆಕೆಯ ಮೇಲೆ ಅನುಮಾನಪಡುತ್ತಿದ್ದರು ಎಂದು ನನ್ನ ಮಗಳು ನಮ್ಮ ಬಳಿ ಹೇಳುತ್ತಿದ್ದಳು ಎಂರೆ ಸರಿ. ಹಾಗೆಯೇನಮ್ಮ ಆಸ್ತಿಯನ್ನು ಆಕೆಯ ಹೆಸರಿಗೆ ಬರೆಸಿಕೊಂಡು ಬರುವಂತೆ ಆಕೆಗೆ ಕಿರುಕುಳ ಕೊಡುತ್ತಿದ್ದರು ಎಂದು ನಮ್ಮ ಮಗಳು ನಮ್ಮ ಬಳಿ ಹೇಳುತ್ತಿದ್ದಳು ಎಂದರೆ ಆ ವಿಚಾರ ಗೊತ್ತಿಲ್ಲ, ಆಕೆ ಆಸ್ತಿಯನ್ನು ಆಕೆಯ ಹೆಸರಿಗೆ ಬರೆದುಕೊಡು ಎಂದು ಹೇಳುತ್ತಿದ್ದಳು ಎನ್ನುತ್ತಾರೆ. ಆಸ್ತಿಯನ್ನು ಬರೆದುಕೊಡದಿದ್ದರೆ ನೀನು ಏನಾದರೂ ಮಾಡಿಕೊಂಡು ಸಾಯಿ, ನೀನು ಸತ್ತರೆ ನಾನು ಬೇರೆ ಮದುವೆಮಾಡಿಕೊಳ್ಳುತ್ತೇನೆ ಎಂದು ಆರೋಪಿತರು ಹೇಳುತ್ತಿದ್ದರೆಂದು ನಮ್ಮ ಮಗಳು ನಮ್ಮ ಬಳಿ ಹೇಳುತ್ತಿದ್ದಳು ಎಂದರೆ ಸರಿಯಲ್ಲ. ಈಸಂಬಂಧವಾಗಿ ನಾವು ಪಂಚಾಯಿುತಿ ನಡೆಸಿದ್ದೆವು ಎಂದರೆ ಸಾಕ್ಷಿಯು 3-4 ಬಾರಿ ಪಂಚಾಯಿತಿ ನಡೆದಿರುವುದು ನಿಜ ಎನ್ನುತ್ತಾರೆ. ಏನಾದರೂ ಮಾಡಿಕೊಂಡು ಸಾಯಿ ಎಂದು ಆರೋಪಿ ಪದೇ ಪದೇ ಕಿರುಕುಳ

ಕೊಡುತ್ತಿದ್ದುದರಿಂದ ನನ್ನ ಮಗಳು ನೇಣುಹಾಕಿಕೊಂಡು ಮೃತಪಟ್ಟಿರುತ್ತಾಳೆ ಎಂದು ನಾನು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಮರುಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ನನ್ನ ಮಗಳ ಕೊಲೆಯಾಗಿದೆ ಎಂದು ನಾನು ಹೇಳುತ್ತೇನೆ, ನೇಣುಹಾಕಿಕೊಂಡು ಆಕೆ ಸತ್ತಿಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ಆರೋಪಿತರ ಪರ ವಕೀಲರು ಕಾಲಾವಕಾಶ ಕೇಳಿದ್ದರಿಂದ ಸಾಕ್ಷಿಗೆ 300ರೂ ಭತ್ಯೆ ಕೊಡುವ ಷರತ್ತಿನ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**